# ಚನ್ನಪಟ್ಟಣ ತಾಲ್ಲೂಕಿನ ಶಾಸನಗಳು



ಡಾ. ಎಂ.ಕೆ. ಮಂಜುನಾಥ
ಎಂ.ಎ., ಎಂ.ಫಿಲ್, ಪಿಎಚ್.ಡಿ.

# ಚನ್ನಪಟ್ಟಣ ತಾಲ್ಲೂಕಿನ ಶಾಸನಗಳು

ಡಾ. ಎಂ.ಕೆ. ಮಂಜುನಾಥ

ಎಂ.ಎ., ಎಂ.ಫಿಲ್. ಪಿಎಚ್.ಡಿ.,

ಪ್ರಕಾಶಕರು

ಎಸ್.ಎಲ್.ಎನ್. ಪಬ್ಲಿಕೇಷನ್

ನಂ. 3437, 4ನೇ ಮುಖ್ಯ ರಸ್ತೆ, 9ನೇ ಅಡ್ಡರಸ್ತೆ, ಶಾಸ್ತ್ರೀನಗರ

ಬನಶಂಕರಿ 2ನೇ ಹಂತ, ಬೆಂಗಳೂರು-28

ಫೋನ್ : 9972129376

umeshnagamangala@gmail.com

ಚನ್ನಪಟ್ಟಣ ತಾಲ್ಲೂಕಿನ **ಶಾಸನಗಳು**

ಲೇಖಕರ ವಿಳಾಸ : **ಡಾ. ಎಂ.ಕೆ. ಮಂಜುನಾಥ, ಸಹಾಯಕ** ಪ್ರಾಧ್ಯಾಪಕರು,
ಶ್ರೀ ಆದಿಚುಂಚನಗಿರಿ ಕಲಾ, ವಾಣಿಜ್ಯ ಮತ್ತು ವಿಜ್ಞಾನ
ಕಾಲೇಜು, ನಾಗಮಂಗಲ, ಮಂಡ್ಯ ಜಿಲ್ಲೆ
ಮೊ: 9844674004

ಪ್ರಕಾಶಕರು : ಎಸ್.ಎಲ್.ಎನ್. ಪಬ್ಲಿಕೇಷನ್
ನಂ. 3437, 4ನೇ ಮುಖ್ಯ ರಸ್ತೆ, 9ನೇ ಅಡ್ಡರಸ್ತೆ,
ಶಾಸ್ತ್ರೀನಗರ ಬನಶಂಕರಿ 2ನೇ ಹಂತ
ಬೆಂಗಳೂರು-28 ಫೋನ್ : 9972129376

**ಐಎಸ್‌ಬಿಎನ್ : 978-93-85368-98-1**

ಪ್ರಥಮ ಮುದ್ರಣ : 2018

ಹಕ್ಕುಗಳು : ಲೇಖಕರದ್ದು

ಬಳಸಿದ ಕಾಗದ : 70 ಜಿ.ಎಸ್.ಎಂ. ಮ್ಯಾಫ್ಲಿಥೋ

ಅಳತೆ : 1/8 ಡೆಮ್ಮಿ

ಪುಟಗಳು : XIV + 450 = 464

ಪ್ರತಿಗಳು : 1000

ಬೆಲೆ : ₹ 400-00

ಅಕ್ಷರ ಜೋಡಣೆ : ಸಹನಾ ಗ್ರಾಫಿಕ್ಸ್ ಚಾಮರಾಜಪೇಟೆ,
ಮೊ: 9342196255, 8453453999

ಮುದ್ರಣ : ಓಂ ಶ್ರೀ ಪ್ರಿಂಟರ್ಸ್
ಕಸ್ತೂರಿಬಾ ನಗರ, ಬೆಂಗಳೂರು

# ಪರಿವಿಡಿ


| | | |
|---|---|---|
| 1. | ಸಂಕೇತಾಕ್ಷರಗಳು | 01 |
| 2. | ಶಾಸನಗಳು ದೊರೆತಿರುವ ಊರುಗಳ ಅಕಾರಾದಿ | 02 |
| 3. | ವಂಶಾನುಕ್ರಮದಲ್ಲಿ ಶಾಸನಗಳ ಸೂಚಿ | 05 |
| 4. | ಪ್ರಸ್ತಾವನೆ | 17 |
| 5. | ಶಾಸನ ಪಾಠಗಳು | 37 |
| 6. | ಆಕರ ಗ್ರಂಥಗಳು | 427 |
| 7. | ರಾಜಮನೆತನಗಳ ಹಿನ್ನೆಲೆಯಲ್ಲಿ ಶಾಸನಗಳ ಪಟ್ಟಿ | 429 |
| 8. | ಗ್ರಾಮಾವಾರು ಶಾಸನಗಳ ಪಟ್ಟಿ | 430 |
| 9. | ಛಾಯಾಚಿತ್ರಗಳು | 436 |



ಡಾ. ಮಂಜುನಾಥರವರು ಮೂಲತಃ ಚನ್ನಪಟ್ಟಣ ತಾಲ್ಲೂಕಿನವರೇ ಆಗಿದ್ದು, ತಾವು ಬಾಲ್ಯದಲ್ಲಿ ಅಲ್ಲಲ್ಲಿ ನೋಡಿದ್ದ ಮಾಸ್ತಿಕಲ್ಲು, ವೀರಗಲ್ಲು ಮುಂತಾದವುಗಳಿಂದ ಪ್ರೇರಣೆಗೊಂಡು ಕುತೂಹಲಪೂರಿತವಾಗಿ ಅವರ ಮನದಲ್ಲಿ ಮೊಳಕೆಯೊಡೆದ ಅವರ ಶೋಧಾಸಕ್ತಿ ಈ ಬೃಹತ್ ಗ್ರಂಥದಿಂದಾಗಿ ಹೊರಹೊಮ್ಮಿದೆ. ಇವರು ಅಧ್ಯಯನ ಶೀಲರೂ, ಉತ್ತಮ ಪ್ರಾಧ್ಯಾಪಕರೂ, ಸಂಶೋಧಕರಾಗಿದ್ದು, ಈ ಮೊದಲು ಪ್ರಕಟಗೊಂಡಿರುವ ಅವರ 7 ಮೇರುಕೃತಿಗಳು ಹಾಗೂ 30ಕ್ಕೂ ಹೆಚ್ಚು ಸಂಶೋಧನಾ ಲೇಖನಗಳು ಇದನ್ನು ಸಾಕ್ಷೀಕರಿಸುತ್ತವೆ. ಇವರ ಕೃತಿಗಳಲ್ಲಿ 'ಶಾಸನ ದೀವಿಗೆ' ಹಾಗೂ 'ಶಾಸನ ಪರಿವೀಕ್ಷಣೆ' ಎಂಬ ಸಂಶೋಧನಾ ಕೃತಿ ಇವರ 'ಚನ್ನಪಟ್ಟಣ ತಾಲ್ಲೂಕಿನ ಶಾಸನಗಳು' ಎಂಬ ಅಮೂಲ್ಯ ಗ್ರಂಥಕ್ಕೆ ಆಧಾರಸ್ತಂಭಗಳಾಗಿವೆ.

ಈ ಮೇರುಕೃತಿಯಲ್ಲಿ ಚನ್ನಪಟ್ಟಣ ತಾಲ್ಲೂಕಿನ ಗಂಗರ ಆಳ್ವಿಕೆಯ ಕಾಲದಿಂದ ಆರಂಭಿಸಿ, ಚೋಳರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯದವರೆಗಿನ ಶಾಸನಗಳೂ ಸೇರಿದಂತೆ ಚನ್ನಪಟ್ಟಣದ ಪಾಳೇಗಾರರ ಆಳ್ವಿಕೆ, ಆನಂತರದ ಮೈಸೂರು ಒಡೆಯರ ಆಳ್ವಿಕೆಯ ಶಾಸನಗಳ ಬಗ್ಗೆ ಬೆಳಕು ಚೆಲ್ಲುವ ಈ ಕೃತಿಯು ಓದುಗರಲ್ಲಿ ಶಾಸನಗಳ ಕುರಿತಂತೆ ಕುತೂಹಲ ಮೂಡಿಸುತ್ತದೆ. ಚನ್ನಪಟ್ಟಣ ತಾಲ್ಲೂಕಿನ ಶಿಲಾ ಮತ್ತು ತಾಮ್ರಶಾಸನಗಳು, ಅವುಗಳ ಕಾಲಘಟ್ಟ ಮತ್ತು ಅವುಗಳ ಐತಿಹ್ಯವನ್ನು ಒಳಗೊಂಡಿದ್ದು, ಸುಮಾರು 259 ಶಾಸನಗಳನ್ನು ಸಂಗ್ರಹಿಸಿ ಅವುಗಳನ್ನು ವ್ಯಾಖ್ಯಾನಿಸಿ, ತಾಲ್ಲೂಕಿನ ಸಮಗ್ರ ಇತಿಹಾಸ ಪುನಾರಚನೆಯು ಇತಿಹಾಸದ ಸಂಪುಟಕ್ಕೆ ಸೇರ್ಪಡೆಗೊಳಿಸುತ್ತಿರುವುದು ನಿಜವಾಗಿಯೂ ಶ್ಲಾಘನೀಯ ಕಾರ್ಯವಾಗಿದೆ.

ಚನ್ನಪಟ್ಟಣ ತಾಲ್ಲೂಕಿನ ಪ್ರಾಚೀನ ವೈಭವಗಳು ಪ್ರಜ್ವಲಿಸುತ್ತಿರುವುದಕ್ಕೆ 7ನೇ ಶತಮಾನದ ಇಲ್ಲಿನ ಶಾಸನಗಳೇ ಸಾಕ್ಷಿಯಾಗಿವೆ. ಪ್ರಾಚೀನ ಕಾಲದ ವೀರ ಗುಣ, ದಾನ ಗುಣ, ಸಂಪ್ರದಾಯ, ಸಂಸ್ಕೃತಿಯನ್ನು ಬಿಂಬಿಸುವ ಶಾಸನಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕಿದೆ. ಜನರ ನಿರ್ಲಕ್ಷ್ಯಕ್ಕೆ ಒಳಗಾಗಿ ಕಣ್ಮರೆಯಾಗುತ್ತಿರುವ ತತ್ಸಂಬಂಧಿ ಶಾಸನ ಸ್ಮಾರಕ ಶಿಲ್ಪಗಳನ್ನು ಸಂರಕ್ಷಿಸಬೇಕು ಎಂಬ ಜಾಗೃತಿ ಮೂಡಿಸುವ ಲೇಖಕರ ಈ ಮೇರುಕೃತಿ ಅಜರಾಮರ. ಶಾಸನಗಳ ರಚನಾಕಾರರನ್ನು ಶಾಸನಗಳಲ್ಲಿ ಗುರುತಿಸುವುದು ಕಷ್ಟಸಾಧ್ಯವಾದರೂ, ಈ ಪ್ರಯತ್ನ ವ್ಯವಸ್ಥಿತವಾಗಿಯೇ ರೂಪುಗೊಂಡಿದ್ದು ಲೇಖಕರು ಈ ಪ್ರಯತ್ನದಲ್ಲಿ ಸಫಲರಾಗಿದ್ದಾರೆ. ಶಾಸನಗಳು ಶಾಶ್ವತವಾದವುಗಳೇನೋ ಸರಿ, ಆದರೆ ಈ ಶಾಸನಗಳ ಪರಿಚಯ ಸಾಮಾನ್ಯ ಜನರಿಗೆ ಮೂಡಿಸುವ ಸಲುವಾಗಿ ಡಾ.ಮಂಜುನಾಥರವರ ಈ ಪ್ರಯತ್ನ ಪ್ರಶಂಸನೀಯ.

–ಮುನ್ನುಡಿಯಿಂದ

ಡಾ. ಬಿ.ಕೆ. ಲೋಕೇಶ್